ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	24
ಸದಸ್ಯರ ಹೆಸರು	:	ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರು)
ಉತ್ತರಿಸಬೇಕಾದ ದಿನಾಂಕ	:	16.07.2019
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ). ರಾಜ್ಯದಲ್ಲಿ 2018-19ರ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಮಕ್ಕಳಿಗೆ ಎಷ್ಟು ಜೊತೆ ಸಮವಸ್ತ್ರ ವಿತರಿಸಲಾಗಿದೆ; ಎಷ್ಟು ಜೊತೆ ಸಮವಸ್ತ್ರ ವಿತರಿಸಲು ಬಾಕಿ ಇದೆಯೇ;	ರಾಜ್ಯದಲ್ಲಿ 2018-19ರ ಶೈಕ್ಷಣಿಕ ಸಾಲಿನಲ್ಲಿ 44.57 ಲಕ್ಷ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ವಿತರಿಸಲಾಗಿದೆ. ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ವಿತರಿಸಲಾಗುತ್ತಿರುವ 2ನೇ ಜೊತೆ ಸಮವಸ್ತ್ರವನ್ನು ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಕಾರಣ ವಿತರಿಸಲಾಗಿರುವುದಿಲ್ಲ.
(ಆ) 2019-20ನೇ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಜೊತೆ ಸಮವಸ್ತ್ರ ವಿತರಿಸಲಾಗುತ್ತಿದೆ;	ರಾಜ್ಯ ಸರ್ಕಾರದ ವತಿಯಿಂದ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರತಿ ವಿದ್ಯಾರ್ಥಿಗೆ ಒಂದು ಜೊತೆ ಸಮವಸ್ತ್ರ ವಿತರಿಸಲಾಗುತ್ತಿದೆ.
(ಇ) ಕೇಂದ್ರ ಸರ್ಕಾರದ ಸಮಗ್ರ ಶಿಕ್ಷಣ ಯೋಜನೆಯ ಅನ್ವಯ ಶಾಲಾ ಮಕ್ಕಳಿಗೆ ಒಟ್ಟು ಎಷ್ಟು ಜೊತೆ ಸಮವಸ್ತ್ರ ವಿತರಿಸಬೇಕಾಗಿದೆ; ಈ ಸಮವಸ್ತ್ರಗಳನ್ನು ವಿತರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; 2018-19ನೇ ಸಾಲಿನಲ್ಲಿ ವಿತರಿಸಲು ಬಾಕಿ ಇರುವ ಸಮವಸ್ತ್ರವನ್ನು ಈ ಶೈಕ್ಷಣಿಕ ವರ್ಷದಲ್ಲಿ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಸಮಗ್ರ ಶಿಕ್ಷಣ ಯೋಜನೆಯ ಅನ್ವಯ ಶಾಲಾ ಮಕ್ಕಳಿಗೆ 2ನೇ ಜೊತೆ ಸಮವಸ್ತ್ರ ವಿತರಿಸಬೇಕಾಗಿದೆ; ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದಿಂದ ಅನುದಾನ ಬಿಡುಗಡೆಯಾದಲ್ಲಿ 2ನೇ ಜೊತೆ ಸಮವಸ್ತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ. 2018-19ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕಾಗಿದ್ದ 2ನೇ ಜೊತೆ ಸಮವಸ್ತ್ರದ ಅನುದಾನ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದರೆ 2018-19ನೇ ಸಾಲಿನಲ್ಲಿ ವಿತರಿಸಲು ಬಾಕಿ ಇರುವ ಸಮವಸ್ತ್ರವನ್ನು ಪ್ರಸಕ್ತ ಸಾಲಿನಲ್ಲಿ ವಿತರಿಸಲಾಗುತ್ತದೆ.

ಸಂಖ್ಯೆ: ಇಪಿ 58 ಯೋಯೋಕ 2019

(ಎಸ್.ಆರ್.ಶ್ರೀನಿವಾಸ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು